ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **447/2020**

| | | |
|---|---|---|
| ಸಾಕ್ಷಿಯ ಹೆಸರುಃ | ಹರೀಶ ಡಿ.ಕೆ | DW-3 |
| ತಂದೆಯ ಹೆಸರುಃ | ಕಾಳಯ್ಯ | |
| ವಯಸ್ಸುಃ | 41 ವರ್ಷ | ಪ್ರಮಾಣೀಕರಿಸಿದ ದಿಃ 17.03.2026 |
| ಉದ್ಯೋಗಃ | ಸಹಾಯಕ ಬ್ಯಾಂಕ್ ವ್ಯವಸ್ಥಾಪಕರು, ಬ್ಯಾಂಕ್ ಬರೋಡ, ಪಿರಿಯಾಪಟ್ಟಣ ಶಾಖೆ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

ನಾನು ಪಿರಿಯಾಪಟ್ಟಣ ಶಾಖೆಯ ಬ್ಯಾಂಕ್ ಆಫ್ ಬರೋಡದಲ್ಲಿ ನವೆಂಬರ್ 2025 ರಿಂದ ಇಲ್ಲಿಯವರೆಗೆ ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದೇನೆ.

1. ನಿಪಿ - 1 ನಮ್ಮ ವಿಜಯ ಬ್ಯಾಂಕಿನ ಚೆಕ್ ಆಗಿದೆ. ಈಗ ವಿಜಯ ಬ್ಯಾಂಕು, ಬ್ಯಾಂಕ್ ಆಫ್ ಬರೋಡದೊಂದಿಗೆ ವಿಲೀನಗೊಂಡಿದೆ. ನಿಪಿ-1 ರಲ್ಲಿ ಅಪರಿಪೂರ್ಣ ದಿನಾಂಕ ಇದೆ. ನಮ್ಮ ಬ್ಯಾಂಕಿನಲ್ಲಿ ಅಪರಿಪೂರ್ಣವಾದ ದಿನಾಂಕ ಇರುವ ಚೆಕ್ಕನ್ನು ಮಾನ್ಯ ಮಾಡುವುದಿಲ್ಲ. ನಿಪಿ-1 ನ್ನು ಮೊದಲು ಎಸ್.ಬಿ.ಐ ಬ್ಯಾಂಕಿನಲ್ಲಿ ಡೆಪಾಸಿಟ್ ಗೆ ಹಾಜರುಪಡಿಸಿದ್ದು, ಅವರು ಅದನ್ನು ಸ್ವೀಕರಿಸಿದ್ದರಿಂದ ವಿಜಯಾ ಬ್ಯಾಂಕಿನಿಂದ ಹಿಂಬಹ ನೀಡಿದ್ದಾರೆ. ಆ ರೀತಿ ಹಿಂಬರಹವನ್ನು ಸದರಿ ಚೆಕ್ಕಿಗೆ ಕೊಡಲು ಬರುವುದಿಲ್ಲ.

ಪಾಟೀ ಸವಾಲುಃ ದೂರುದಾರರ ಪರ ವಕೀಲರರಿಂದಃ

1. ನಿಪಿ - 1 ನ್ನು ನಮ್ಮ ಬ್ಯಾಂಕಿಗೆ ಹಾಜರುಪಡಿಸಿದ ಸಮಯದಲ್ಲಿ ನೀವು ಕರ್ತವ್ಯ ನಿರ್ವಹಿಸುತ್ತಿದ್ದೀರಾ ಎಂದರೆ, ಅದು ಸಿಟಿಎಸ್ ಚೆಕ್ ಆದ್ದರಿಂದ ಆನ್ ಲೈನ್ ಮೂಲಕ ಚೆನ್ನೈ ಅಥವಾ ಬೆಂಗಳೂರಿಂದ ಬರುತ್ತದೆ. ನಿಪಿ -1 ಬೆಂಗಳೂರಿನಿಂದ ಬಂದಿದೆ.
2. ಚೆಕ್ಕಿನಲ್ಲಿ ಒಂದೇ ಸಂಖ್ಯೆಯ ದಿನಾಂಕ ನಮೂದು ಮಾಡಬೇಕಾದರೆ ಪಕ್ಕದಲ್ಲಿ ಮೊದಲು 0 ಅಂಕಿಯನ್ನು ನಮೂದು ಮಾಡಬೇಕು ಎಂಬ ನಿಯಮ ಇದೆಯಾ ಎಂದರೆ, ಇದೆ. ಆ ಬಗ್ಗೆ ದಾಖಲೆ ತಂದಿಲ್ಲ, ಬೇಕಾದರೆ ಹಾಜರುಪಡಿಸುತ್ತೇವೆ.
3. ಅಪೂರ್ಣ ಚೆಕ್ ಆಗಿದ್ದರೆ ನಿಮ್ಮ ಮುಖ್ಯ ಶಾಖೆಯವರು ಅದನ್ನು ಹಿಂಬರಹದಲ್ಲಿ ನಮೂದು ಮಾಡುತ್ತಿದ್ದರು, ಅದು ಸರಿಯಾದ ಚೆಕ್ ಆಗಿದ್ದರಿಂದ ಅದನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿಯ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

4. ನಿಮ್ಮ ಮುಖ್ಯ ಕಛೇರಿಯವರೇ ಹಿಂಬರಹ ನೀಡಿದ್ದರಿಂದ ನಿಮಗೆ ಈ ಪ್ರಕರಣದಲ್ಲಿ ಸಾಕ್ಷಿ ಹೇಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಸಂಬಂಧ ನೀವು ನೀವು ನಿಮ್ಮ ಮುಖ್ಯ ಕಛೇರಿಗೆ ಪತ್ರ ಬರೆದು ಮಾಹಿತಿ ಕೋರಿದ್ದೀರಾ ಎಂದರೆ, ಇಲ್ಲ.

5. ನಿಪಿ-1 ಅಪೂರ್ಣ ಚೆಕ್ ಅಲ್ಲ, ಕಣ್ತಪ್ಪಿನಿಂದ 0 ಮಾತ್ರ ಬಿಟ್ಟು ಹೋಗಿದ್ದರೂ ನೀವು ಅಪುರ್ಣ ಚೆಕ್ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

6. ಆರೋಪಿಯ ಕೋರಿಕೆ ಮೇರೆಗೆ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಆರೋಪಿ ಯಾರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ